Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 Issue - 47 15th May 2025

## Joint meeting with RCC Tallur

ವಿಷಯ : ಯುವಜನರು ಮತ್ತು ಉದ್ಯಮಗಳು

Chief Guest :

**Sri Pratapchandra Shetty B.**
Secretary,
Sujnan Educational Trust Kundapura (R.)

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**

# ವಾರದ ವರದಿ







ಇತ್ತೀಚಿನ ದಿನಗಳಲ್ಲಿ ಆರೋಗ್ಯದೊಂದಿಗೆ ಸೌಂದರ್ಯದ ಬಗ್ಗೆಯೂ ಜನರು ಕಾಳಜಿಯನ್ನು ವಹಿಸುತ್ತಿರುವುದು ಕಂಡುಬರುತ್ತಿದೆ. ಅಂತೆಯೇ ಸೌಂದರ್ಯವರ್ಧಕ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ಮಾಹಿತಿಯಾಗಿತ್ತು ಈ ವಾರದ ಸಭೆ. ಹೊಟೇಲ್ ಶಿವಪ್ರಸಾದ್ ಗ್ರ್ಯಾಂಡ್‌ನಲ್ಲಿ ನಡೆದ ಈ ಸಭೆಯು ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಹಂಗಾಮಿ ಕಾರ್ಯದರ್ಶಿಯಾಗಿದ್ದ ರೊ. ಸತ್ಯನಾರಾಯಣ ಪುರಾಣಿಕರು ಕಳೆದ ವಾರದ ವರದಿಯನ್ನು ಸಭೆಗೆ ತಿಳಿಸಿದರು. ರೊ. ವಿವಿಯನ್ ಕ್ರಾಸ್ತಾರವರು ವಾರದ ಚಿಂತನೆಯನ್ನು ನೀಡುತ್ತಾ “ನಾವು ಯಾವುದೇ ಕೆಲಸ ಕಾರ್ಯಗಳಾಗಲಿ ಮಾಡಲು ಪ್ರಯತ್ನ ಮಾಡದೇ ಇರುವುದೇ ಅತಿ ದೊಡ್ಡ ಸೋಲು” ಎಂದು ತಿಳಿಸಿದರು.

ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ರೋಟರಿ ಮಾಹಿತಿಯಲ್ಲಿ ವಲಯ ಸೇನಾನಿಯ ಜವಾಬ್ದಾರಿಗಳ ಬಗ್ಗೆ ತಿಳಿಸಿದರು. ಸಭೆಯ ಸಂಪನ್ಮೂಲ ವ್ಯಕ್ತಿಯಾದ ರೊ. ಡಾ. ಉಮೇಶ್ ಪುತ್ರನ್‌ರವರ ಬಗ್ಗೆ ಕಿರು ಪರಿಚಯವನ್ನು ಸ್ವತಃ ಅಧ್ಯಕ್ಷರೇ ಸಭೆಗೆ ತಿಳಿಸಿದರು. ನಂತರ ರೊ. ಡಾ. ಉಮೇಶ್ ಪುತ್ರನ್‌ರವರು ತಮ್ಮ ಉಪನ್ಯಾಸವನ್ನು ಆರಂಭಿಸಿ ಸಾಮಾನ್ಯವಾಗಿ ಕಂಡು ಬರುವ ಚರ್ಮದ ಕಾಯಿಲೆಗಳ ಬಗ್ಗೆ ತಿಳಿಸಿದರು. ಸುಮಾರು 3000 ಬಗೆಯ ಚರ್ಮದ ಕಾಯಿಲೆಗಳಿದ್ದು, 500ಕ್ಕೂ ಅಧಿಕ ಕಾಯಿಲೆಗಳು ಸಾಮಾನ್ಯವಾಗಿ ಕಾಣಸಿಗುತ್ತದೆ ಹಾಗೂ ಅವುಗಳು ಪ್ರದೇಶವಾರು ಹಾಗೂ ದೇಶಗಳಿಗೆ ಅನುಗುಣವಾಗಿ ಇರುತ್ತದೆ ಎಂದರು. ಚರ್ಮವು ನಮ್ಮ ದೇಹದಲ್ಲಿರುವ ಅತಿದೊಡ್ಡ ಅಂಗ ಹಾಗೂ ಚರ್ಮವು ದೇಹದ ಸೌಂದರ್ಯವನ್ನು ಹೆಚ್ಚಿಸುವುದು ಮಾತ್ರವಲ್ಲದೆ ವೈರಸ್ ಇತ್ಯಾದಿ ರೋಗಾಣುಗಳಿಂದ ದೇಹವನ್ನು ರಕ್ಷಿಸುತ್ತದೆ ಮತ್ತು ದೇಹದ ಉಷ್ಣತೆಯನ್ನು ಸಮತೋಲನದಲ್ಲಿಡಲು ಸಹಕರಿಸುತ್ತದೆ ಎಂದರು. ಹಾಗೆಯೇ ಮುಂದುವರೆಸುತ್ತಾ ಕೆಲವು ಸಾಮಾನ್ಯವಾಗಿ ನಮ್ಮ ಪ್ರದೇಶದಲ್ಲಿ ಕಂಡು ಬರುವ ಕೆಲವು ಚರ್ಮದ ಕಾಯಿಲೆಗಳ ಬಗ್ಗೆ ತಿಳಿಸಿದರು. ಗೇರುಬೀಜ ಕಾರ್ಖಾನೆಯ, ಸಿಮೆಂಟ್ ಕೆಲಸದ ಕಾರ್ಮಿಕರಿಗೆ ಸಾಮಾನ್ಯವಾಗಿ Eczema, ಅಲರ್ಜಿಯಂತಹ ಚರ್ಮರೋಗಗಳು ಕಾಣಿಸಿಕೊಳ್ಳುತ್ತದೆ. ಇದು ಒಮ್ಮೆ ಕಾಣಿಸಿಕೊಂಡರೆ ಅದರಿಂದ ರಕ್ಷಣೆ ಮುಖ್ಯ. ಕೈ ಕವಚವನ್ನು ಧರಿಸಿ ಕೆಲಸ ಮಾಡುವುದರಿಂದ ಸ್ವಲ್ಪ ಮಟ್ಟಿಗೆ ತಡೆಗಟ್ಟಲು ಸಾಧ್ಯ ಎಂದರು.

**Ring worm :** ಇದು Fungal Infection ಆಗಿದ್ದು, ನೀರು, ಬೆವರಿನ ತೇವಾಂಶಕ್ಕೆ ಬೆಳೆಯುವ ಕ್ರಿಮಿಯಾಗಿದೆ. ಹಾಗಾಗಿ ಬೆವರು ನಿಲ್ಲುವ ಪ್ರದೇಶಗಳನ್ನು ಹಾಗೂ ಸಂಪೂರ್ಣ ದೇಹದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಅಗತ್ಯ ಎಂದರು.

**ತೊನ್ನು** ಒಂದು ಸಾಮಾಜಿಕ ಕಾಯಿಲೆ. ಇದರಿಂದ ದೈಹಿಕ ತೊಂದರೆ ಇಲ್ಲವಾದರೂ ರೋಗಿಯು ಮಾನಸಿಕವಾಗಿ ಕುಗ್ಗುತ್ತಾನೆ. ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ಪಡೆದರೆ 100% ಗುಣಪಡಿಸಬಹುದು ಹಾಗೂ ಕೈಕಾಲು ಬೆರಳುಗಳು, ತುಟಿಗೆ ಬಂದರೆ ಗುಣಪಡಿಸುವುದು ಕಷ್ಟ ಸಾಧ್ಯ ಎಂದರು.

ತಲೆಗೂದಲು ಉದುರುವಿಕೆಯ ಬಗ್ಗೆ ತಿಳಿಸುತ್ತಾ, ಪುರುಷರಲ್ಲಿ ಕೂದಲು ಕಸಿ ಹಾಗೂ Anti - Androgen ಚಿಕಿತ್ಸೆಯ ಬಗ್ಗೆ ತಿಳಿಸಿದರು. ಸ್ತ್ರೀಯರಲ್ಲಿ ಹೆರಿಗೆಯ ನಂತರ, ಮಾನಸಿಕ ಒತ್ತಡದಿಂದ, ಹಾರ್ಮೋನ್ ಸಂಬಂಧಿತವಾದ ಕೂದಲು ಉದುರುವಿಕೆ ಸಮಸ್ಯೆ ತಲೆದೋರುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದ ಚಿಕಿತ್ಸೆ ಪಡೆಯಬೇಕೆಂದರು. ದಿನಕ್ಕೆ 100 ಕೂದಲು ಉದುರಿದರೆ ಸಮಸ್ಯೆಯಲ್ಲ ಹಾಗೂ ನೀರು, ಶ್ಯಾಂಪೂಗಳ ವ್ಯತ್ಯಾಸಕ್ಕೂ ಕೂದಲುದುರುವಿಕೆಗೂ ಸಂಬಂಧವಿಲ್ಲ ಎಂದರು. ಮೊಡವೆ, wartsಗಳ ಬಗ್ಗೆ ಹಾಗೂ ಸೋರಿಯಾಸಿಸ್, ಕುಷ್ಠರೋಗದ ಬಗ್ಗೆ ತಿಳಿಸಿದರು. ಸೌಂದರ್ಯ ಚಿಕಿತ್ಸೆಯ ಬಗ್ಗೆ ತಿಳಿಸಿ Hydro facial, Chemical peeling ಬಗ್ಗೆ ವಿಷಯ ತಿಳಿಸಿದರು.

ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಮಾತನಾಡಿ ಚರ್ಮರೋಗದ ಬಗ್ಗೆ ಮಾಹಿತಿ ನೀಡಿದ ರೊ. ಉಮೇಶ್ ಪುತ್ರನ್ ರವರಿಗೆ ಧನ್ಯವಾದವನ್ನು ಸಲ್ಲಿಸಿ, ಕುಂದಾಪುರದ ಜನತೆಗೆ ಚಿನ್ಮಯಿ ಆಸ್ಪತ್ರೆಯ ಚರ್ಮರೋಗ ವಿಭಾಗದಿಂದ ತುಂಬಾ ಉಪಯೋಗವಾಗುತ್ತಿದೆ ಎಂದರು. ರೊ. ಡಾ. ಉಮೇಶ್ ಪುತ್ರನ್‌ರವರನ್ನು ಸಭೆಯಲ್ಲಿ ಗೌರವಿಸಲಾಯಿತು. ವಲಯ ಸೇನಾನಿ ರೊ. ಮಹೇಂದ್ರ ಶೆಟ್ಟಿಯವರು ನಗೆ ಚಟಾಕಿ ಸಿಡಿಸಿದರು ಲಕ್ಕಿ ರೊಟೇರಿಯನ್ ಆಗಿ ಆ್ಯನೆಟ್ ಆರಾಧ್ಯ ಬಾಯರಿ ಮೂಡಿಬಂದಳು. ರೊ. ಸುರೇಖಾ ಪುರಾಣಿಕರು ಧನ್ಯವಾದ ಸಮರ್ಪಣೆಗೈದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಸಂಪನ್ನಗೊಂಡಿತು.







## Rotary Information

**ರೋಟರಿ ವಲಯ ಸೇನಾನಿಯ ಪಾತ್ರ ಮತ್ತು ಜವಾಬ್ದಾರಿಗಳು.**

ನಮ್ಮ ರೋಟರಿ ಜಿಲ್ಲೆ 3182 ನ್ನು 11 ವಲಯಗಳಾಗಿ ವಿಂಗಡಿಸಲಾಗಿದೆ. ವಲಯ ಒಂದರಲ್ಲಿ ನಮ್ಮ ಪರಿಸರದ 8 ಕ್ಲಬ್ ಗಳು ಇವೆ. ಈ ವಲಯದಲ್ಲಿ ಸಹಾಯಕ ರೋಟರಿ ರಾಜ್ಯಪಾಲರಿಗೆ ಸಹಾಯಕರಾಗಿ ಮೂವರು ವಲಯ ಸೇನಾನಿಗಳು ನೇಮಕ ಗೊಂಡಿರುತ್ತಾರೆ.

ಜಿಲ್ಲಾ ಡೈರೆಕ್ಟರಿಯಲ್ಲಿ ನಮೂದಿಸಿರುವ ವಲಯ ಸೇನಾನಿಯ 11 ಜವಾಬ್ದಾರಿಗಳಲ್ಲಿ ಪ್ರಾಮುಖ್ಯವಾದವಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

1. ತನ್ನ ಅಧೀನದಲ್ಲಿ ಬರುವ ರೋಟರಿ ಕ್ಲಬ್ ಗಳಲ್ಲಿ ಅಂತರಾಷ್ಟ್ರೀಯ ರೋಟರಿ ಸಂಸ್ಥೆ ಹಾಗೂ ಜಿಲ್ಲೆಯ ತಂಡದ ಸೂಚನೆಯಂತೆ ಸದಸ್ಯತನ ಅಭಿವೃದ್ಧಿಯ ಗುರಿಯನ್ನು ಮುಟ್ಟಲು ಪ್ರೋತ್ಸಾಹಿಸುವುದು
2. ನಿಗದಿತ ಜಿಲ್ಲಾ ಯೋಜನೆಗಳಲ್ಲಿಭಾಗವಹಿಸುವಂತೆ ರೋಟರಿ ಸಂಸ್ಥೆಗಳನ್ನು ಉತ್ತೇಜಿಸುವುದು
3. ರೋಟರಿ ಜಿಲ್ಲಾ ಸಹಾಯಕ ರಾಜ್ಯಪಾಲರಿಗೆ ತನ್ನ ಅಧೀನದಲ್ಲಿರುವ ಕ್ಲಬ್‌ಗಳ ಕಾರ್ಯನಿರ್ವಹಣೆ ಮತ್ತು ಪ್ರಗತಿಯನ್ನು ವರದಿ ಮಾಡುವಂತಹದ್ದು
4. ರೋಟರಿ ಸದಸ್ಯತನ ಅಭಿವೃದ್ಧಿ ಹಾಗೂ ದತ್ತಿನಿಧಿ ವಿಚಾರ ಸಂಕಿರಣ, ಜಿಲ್ಲಾ ಸಮ್ಮೇಳನ ಹಾಗೂ ಇತರ ಜಿಲ್ಲಾ ಮತ್ತು ವಲಯ ವ್ಯಾಪ್ತಿಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಂತೆ ರೋಟರಿ ಸದಸ್ಯರನ್ನು ಪ್ರೇರೇಪಿಸುವುದು.

**ನೀಡಿದವರು – ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ**

## ಕಳೆದ ವಾರದ ಚಿಂತನೆ

ನೀರಿನಲ್ಲಿ ಬಿದ್ದ ಎಲ್ಲರೂ ಮುಳುಗುವುದಿಲ್ಲ, ಈಜಲು ಬಾರದವರು ಮಾತ್ರ ಮುಳುಗುತ್ತಾರೆ. ಜೀವನದಲ್ಲೂ ಅಷ್ಟೆ. ಸಮಸ್ಯೆಗಳಿರುವ ಪ್ರತಿಯೊಬ್ಬರೂ ಸೋಲುವುದಿಲ್ಲ. ಪರಿಹಾರ ಹುಡುಕದವರು ಮಾತ್ರ ಸೋಲುತ್ತಾರೆ. ಆದುದರಿಂದ ಒಂದು ವಿಚಾರವನ್ನು ನಾವು ಮನಸ್ಸಿನಲ್ಲಿಡಬೇಕು. ನಮ್ಮ ಪ್ರಯತ್ನಗಳಲ್ಲಿ ಸೋಲಾದರೆ ಪರವಾಗಿಲ್ಲ ಆದರೆ ಪ್ರಯತ್ನಗಳನ್ನೇ ಮಾಡದಿರುವುದು ಜೀವನದ ಅತಿ ದೊಡ್ಡ ಸೋಲು.

**ನೀಡಿದವರು – ರೊ. ವಿವಿಯನ್ ಕ್ರಾಸ್ತೋ**

## ಹುಟ್ಟುಹಬ್ಬದ ಶುಭಾಶಯಗಳು



**ರೊ. ಮಾಜಿ ಅಧ್ಯಕ್ಷ ಡಾ. ಹೆಚ್. ಎ. ವಿಶ್ವೇಶ್ವರ್**
**ದಿನಾಂಕ : ಮೇ 18**
**ಮೊಬೈಲ್ : 9448869987**

## Health Corner

❖ ಯಷ್ಟಿ ಮಧು ಚೂರ್ಣವನ್ನು ಶುದ್ಧ ಜೇನುತುಪ್ಪದೊಂದಿಗೆ ಸೇರಿಸಿ ದಿನವೂ ಬಿಂಗ್ ಇರುವಲ್ಲಿ ಮುಖಕ್ಕೆ ಹಚ್ಚಿದರೆ ಬಿಂಗಿನ ಸಮಸ್ಯೆಯಿಂದ ಪರಿಹಾರ ದೊರೆತು ಮುಖವು ಕಾಂತಿಯುಕ್ತವಾಗಿ ತೋರುತ್ತದೆ

❖ ತುಳಸಿ ಎಲೆಗಳಲ್ಲಿ ಉತ್ಕರ್ಷಣ ನಿರೋಧಕಗಳು ಮತ್ತು ಸೂಕ್ಷ್ಮ ಪೋಷಕಾಂಶಗಳು ಅಧಿಕವಾಗಿದ್ದು ಅದು ನಿಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ತುಳಸಿಯ ಔಷಧೀಯ ಗುಣಗಳು ಕೆಮ್ಮು, ಶೀತ, ಸೈನಸ್ ಮತ್ತು ಇತರ ಉಸಿರಾಟದ ತೊಂದರೆಗಳಂತಹ ಶೀತದಿಂದ ಹರಡುವ ರೋಗಗಳ ವಿರುದ್ಧ ಹೋರಾಡಲು ದೇಹಕ್ಕೆ ಸಹಾಯಮಾಡುತ್ತದೆ.

❖ ಖಾಲಿ ಹೊಟ್ಟೆಯಲ್ಲಿ ಒಂದಿಷ್ಟು ನೆನೆಸಿಟ್ಟ ಮೆಂತೆ ಕಾಳುಗಳನ್ನು ಜಗಿದರೆ, ದೇಹದ ತೂಕ ಇಳಿಸಿಕೊಳ್ಳಬಹುದು. ಮೆಂತೆ ಕಾಳುಗಳಲ್ಲಿ ಇರುವಂತಹ ನೈಸರ್ಗಿಕ ಹೀರಿಕೊಳ್ಳುವ ನಾರಿನಾಂಶವಾಗಿರುವಂತಹ ಗ್ಯಾಲಕ್ಟೋಮನ್ನನ್ ರಕ್ತದಲ್ಲಿ ಸಕ್ಕರೆ ಹೀರುವಿಕೆಯನ್ನು ನಿಧಾನವಾಗಿಸಿ ಮಧುಮೇಹಿಗಳಿಗೆ ನೆರವಾಗುತ್ತದೆ. ಕೂದಲಿನ ಆರೋಗ್ಯಕ್ಕೆ ಮೆಂತೆ ಕಾಳುಗಳು ತುಂಬಾ ಒಳ್ಳೆಯದು.

